# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಗ್ರಾಅಪ ಇಲಾಖೆಯಲ್ಲಿ ಪಂಚತಂತ್ರ ತಂತ್ರಾಂಶದ ಎರಡನೇ ಅವತರಣಿಕೆಯನ್ನು (ಪಂಚತಂತ್ರ 2.0) ಅಭಿವೃದ್ಧಿಪಡಿಸಿ ಅನುಷ್ಠಾನಗೊಳಿಸುವ ಕುರಿತು.

ಓದಲಾಗಿದೆ: 1. ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ/15/ಇ-ಆಡಳಿತ/2019, ದಿನಾಂಕ:04.03.2020

2. ಸರ್ಕಾರದ ಕಾರ್ಯಾದೇಶ ಸಂಖ್ಯೆ: ಗ್ರಾಅಪ/15/ಇ-ಆಡಳಿತ/2019, ದಿನಾಂಕ:04.05.2020

*****

ಪ್ರಸ್ತಾವನೆ:

ಪಂಚತಂತ್ರ ತಂತ್ರಾಂಶವನ್ನು 2011 ನೇ ಸಾಲಿನಲ್ಲಿ ಗ್ರಾಮ ಪಂಚಾಯತ್‌ಗಳ ಲೆಕ್ಕ ಪತ್ರ ನಿರ್ವಹಣೆಗಾಗಿ ಎನ್ ಐ ಸಿ ರವರಿಂದ ಅಭಿವೃದ್ಧಿಪಡಿಸಿ ತಂತ್ರಾಂಶವನ್ನು ಎಲ್ಲಾ ಗ್ರಾಮ ಪಂಚಾಯತ್‌ಗಳಲ್ಲಿ ಅನುಷ್ಠಾನ ಮಾಡಲಾಗಿತ್ತು. ಪಂಚತಂತ್ರ ತಂತ್ರಾಂಶವನ್ನು ಅಭಿವೃದ್ಧಿಪಡಿಸಿ ಸುಮಾರು 10 ವರ್ಷಗಳಾಗಿದ್ದು, ಪಂಚತಂತ್ರ ತಂತ್ರಾಂಶವನ್ನು ಉನ್ನತೀಕರಣಗೊಳಿಸಿ ಪಂಚತಂತ್ರ ತಂತ್ರಾಂಶದ ಎರಡನೇ ಅವತರಣಿಕೆಯನ್ನು (ಪಂಚತಂತ್ರ 2.0) ಅಭಿವೃದ್ಧಿಪಡಿಸಿ ಅನುಷ್ಠಾನಗೊಳಿಸಲು ಇಲಾಖೆಯು ತೀರ್ಮಾನಿಸಿದೆ.

ಅದರಂತೆ, ಪಂಚತಂತ್ರ 2.0 ಅಭಿವೃದ್ಧಿಗಾಗಿ ಅಗತ್ಯವಿರುವ ಮಾಹಿತಿಯನ್ನು ಕ್ರೋಢೀಕರಿಸಲು ಪಂಚಾಯತ್ ರಾಜ್ ಸಂಸ್ಥೆಗಳ ಆಧುನೀಕರಣ ಮತ್ತು ಡಿಜಿಟಲೀಕರಣಕ್ಕಾಗಿ ದೀರ್ಘಾವಧಿಯ ತಂತ್ರಜ್ಞಾನ ದೃಷ್ಠಿ ಮತ್ತು ವೇದಿಕೆಯನ್ನು ನಿರ್ಮಿಸಿ, ತಂತ್ರಾಂಶವನ್ನು ಅಭಿವೃದ್ಧಿಪಡಿಸಲು ವೆಂಡರ್ ಆಯ್ಕೆಗಾಗಿ ಹಾಗೂ ವೆಂಡರ್ ಆಯ್ಕೆಯಾದ ನಂತರ ಸದರಿಯವರಿಗೆ ತಂತ್ರಾಂಶದ ಅಭಿವೃದ್ಧಿಗಾಗಿ ಅನುವು ಮಾಡಿಕೊಡಲು 18 ತಿಂಗಳ ಅವಧಿಗಾಗಿ ಸಮಾಲೋಚಕರುಗಳನ್ನು ಸಂಸ್ಥೆಗಳಿಂದ ಪಡೆಯಲು ಟೆಂಡರ್ ಕರೆಯಲಾಗಿದ್ದು, ಓದಲಾದ (1) ರಲ್ಲಿ ರಚಿಸಲಾದ ಕಮಿಟಿಯು ಪರಿಶೀಲಿಸಿ ನಿರ್ಧರಿಸಿದಂತೆ M/s. Grant Thornton India LLP, Bengaluru ಇವರು ಆಯ್ಕೆಯಾಗಿರುತ್ತಾರೆ. ಅದರಂತೆ ಓದಲಾದ (2) ರಲ್ಲಿ ಸದರಿ ಸಂಸ್ಥೆಗೆ ಪಂಚತಂತ್ರ 2.0 ಅಭಿವೃದ್ಧಿಗಾಗಿ ರೂ. 3,15,43,996/- ವೆಚ್ಚದಲ್ಲಿ ಸಮಾಲೋಚಕರಾಗಿ ಕಾರ್ಯನಿರ್ವಹಿಸಲು ಕಾರ್ಯಾದೇಶ ನೀಡಲಾಗಿದೆ. ಪಂಚತಂತ್ರ 2.0 ಅಭಿವೃದ್ಧಿಪಡಿಸಿ ಅನುಷ್ಠಾನಗೊಳಿಸಲು 2020-21ನೇ ಸಾಲಿನ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಗಣಕೀಕರಣ ಗಣಕೀಕರಣ ಲೆಕ್ಕಶೀರ್ಷಿಕೆ:2515-00-101-0-24-059 ರಡಿ ರೂ.300.00 ಲಕ್ಷ ಅನುದಾನವನ್ನು ನಿಗದಿಪಡಿಸಲಾಗಿದೆ. ಅದರಂತೆ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆಯು ಪಂಚತಂತ್ರ ತಂತ್ರಾಂಶವನ್ನು ಉನ್ನತೀಕರಣಗೊಳಿಸಿ ಪಂಚತಂತ್ರ ತಂತ್ರಾಂಶದ 2 ನೇ ಅವತರಣಿಕೆಯನ್ನು ಅಭಿವೃದ್ಧಿಪಡಿಸಿ ಅನುಷ್ಠಾನಗೊಳಿಸಬೇಕಾಗಿರುವುದರಿಂದ ಈ ಆದೇಶ.

.....2

**ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ/15/ಇ-ಆಡಳಿತ/2019, ಬೆಂಗಳೂರು, ದಿನಾಂಕ:19.06.2020**

ಪ್ರಸ್ತಾವನೆಯಲ್ಲಿ ವಿವರಿಸಿದಂತೆ, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆಯ ಪಂಚತಂತ್ರ ತಂತ್ರಾಂಶವನ್ನು ಉನ್ನತೀಕರಣಗೊಳಿಸಿ ಪಂಚತಂತ್ರ ತಂತ್ರಾಂಶದ ಎರಡನೇ (ಪಂಚತಂತ್ರ 2.0) ಅವತರಣಿಕೆಯನ್ನು ಅಭಿವೃದ್ಧಿಪಡಿಸಿ ಅನುಷ್ಠಾನಗೊಳಿಸಲು ಆದೇಶಿಸಿದೆ. ಪಂಚತಂತ್ರ 2.0 ಅಭಿವೃದ್ಧಿಗಾಗಿ ಅಗತ್ಯವಿರುವ ಮಾಹಿತಿಯನ್ನು ಕ್ರೋಢೀಕರಿಸುವುದು, ಪಂಚಾಯತ್ ರಾಜ್ ಸಂಸ್ಥೆಗಳ ಆಧುನಿಕರಣ ಮತ್ತು ಡಿಜಿಟಲೀಕರಣಕ್ಕಾಗಿ ದೀರ್ಘಾವಧಿಯ ತಂತ್ರಜ್ಞಾನ ದೃಷ್ಠಿ ಮತ್ತು ವೇದಿಕೆಯನ್ನು ನಿರ್ಮಿಸುವುದು, ತಂತ್ರಾಂಶವನ್ನು ಅಭಿವೃದ್ಧಿಪಡಿಸಲು ಟೆಂಡರ್ ಮೂಲಕ ವೆಂಡರ್ ಆಯ್ಕೆಗಾಗಿ ಇಲಾಖೆಗೆ ಸೂಕ್ತ ಮಾಹಿತಿ ನೀಡುವುದು ಹಾಗೂ ಆಯ್ಕೆಯಾದ ವೆಂಡರ್‌ಗಳಿಗೆ ಸಲಹೆ ಸಹಕಾರ ನೀಡಿ ಕೆಲಸ ನಿರ್ವಹಿಸಲು ಟೆಂಡರ್ ಮೂಲಕ ಸಮಾಲೋಚಕರಾಗಿ ಆಯ್ಕೆಯಾಗಿರುವ M/s. Grant Thornton India LLP, Bengaluru ರವರಿಗೆ ಆದೇಶಿಸಿದೆ.

ಪಂಚತಂತ್ರ 2.0 ಅಭಿವೃದ್ಧಿಗಾಗಿ ತಗಲುವ ವೆಚ್ಚವನ್ನು 2020-21 ಮತ್ತು 2021-22 ನೇ ಸಾಲಿನ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಗಣಕೀಕರಣ ಗಣಕೀಕರಣ ಲೆಕ್ಕಶೀರ್ಷಿಕೆ:2515-00-101-0-24-059 ರಡಿ ಭರಿಸಲು ಮಂಜೂರಾತಿ ನೀಡಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ
8/7/20
(ಶಿಲ್ಪಾ ನಾಗ್, ಭಾ.ಆ.ಸೇ)
ನಿರ್ದೇಶಕರು (ಇ-ಆಡಳಿತ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಇವರಿಗೆ:

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು/ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು (ಪಂ.ರಾಜ್) ಇವರ ಆಪ್ತ ಕಾರ್ಯದರ್ಶಿಗಳು, ಗ್ರಾಅಪ.
2. ಎಲ್ಲಾ ನಿರ್ದೇಶಕರುಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂ ರಾಜ್ ಇಲಾಖೆ.
3. ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.
4. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು.
5. ಶ್ರೀ ಪಿ.ಎಸ್.ಭಟ್, ಹಿರಿಯ ತಾಂತ್ರಿಕ ನಿರ್ದೇಶಕರು, ಎನ್.ಐ.ಸಿ, ಬೆಂಗಳೂರು.
6. ಶ್ರೀ ಸಮರ್ಥರಾಮ್, ಹಿರಿಯ ತಾಂತ್ರಿಕ ನಿರ್ದೇಶಕರು, ಎನ್.ಐ.ಸಿ, ಬೆಂಗಳೂರು.
7. ಶ್ರೀ ಪ್ರಶಾಂತ.ಜಿ, ತಾಂತ್ರಿಕ ನಿರ್ದೇಶಕರು, ಎನ್.ಐ.ಸಿ, ಬೆಂಗಳೂರು.
8. ಮುಖ್ಯ ಸಂಪಾದಕರು ಹಾಗೂ ಸಾರ್ವಜನಿಕ ಸಂಪರ್ಕಾಧಿಕಾರಿಗಳು, ಕರ್ನಾಟಕ ವಿಕಾಸ, ಬೆಂಗಳೂರು
9. ರಾಜ್ಯ ಯೋಜನಾ ವ್ಯವಸ್ಥಾಪಕರು, ಇ-ಪಂಚಾಯತ್, ಗ್ರಾಅಪ ಇಲಾಖೆ.
10. M/s. Grant Thornton India LLP, Bengaluru.

d:\jg_new\jg_2020\go_2020\ಪಂಚತಂತ್ರ-2.0_31543996.docx